ಸೇರ್ಕೋ...' ಅಂತ ಹೇಳಿದೆ.

ಮುಂದಿನ ವಾರ ಅದೇ ಹುಡುಗ ಸಿಕ್ಕಿದ. ಈ ಬಾರಿಯೂ ಪೇರಿಸಿಕೊಂಡಿದ್ದ. ನಾನು ಹೇಳಿದಂತೆ ಟ್ಯಾಕ್ಸಿಯೊಂದನ್ನು ಬುಕ್ಕೂ ಮಾಡಿಕೊಂಡಿದ್ದ. ಬೈಕಾದರೆ ತಾನೇ ಓಡಿಸಬೇಕು ಹಾಗಾಗಿ ಮಿತಿ ಮೀರಿ ಕುಡಿಯಬಾರದೆನ್ನುವ ತಿಳಿವಳಿಕೆಯಿತ್ತೇನೋ? ಈ ಬಾರಿ ಟ್ಯಾಕ್ಸಿಯಲ್ವಾ, ರೂಮಿನ ಹತ್ತಿರ ಇಳಿಸುತ್ತಾನೆ ಬಿಡು ಅನ್ನುವ ಉಡಾಫೆ. ಕುಡಿತ ಅಳತೆ ಮೀರಿತ್ತು ಮಾತ್ರವಲ್ಲ, ಗಾಡಿಯೊಳಗೇ ಕಕ್ಕಿಕೊಂಡು ಹೊಲಸು ಮಾಡಿಬಿಟ್ಟಿದ್ದ. ಟ್ಯಾಕ್ಸಿಯವ ಬಿಡುತ್ತಾನಾ? ಗಾಡೀನೆಲ್ಲಾ ಗಲೀಜು ಮಾಡಿದ್ದೀಯ, ಕ್ಲೀನು ಮಾಡಿಕೊಡು ಅಂತ ಗಂಟುಬಿದ್ದಿದ್ದಾನೆ. ಅಧಿಕಾರಿಯ ಮಗ, ಮೈ ಬಗ್ಗುತ್ತದಾದರೂ ಹೇಗೆ? ಸ್ವಲ್ಪ ಎಕ್ಸ್‌ಟ್ರಾ ದುಡ್ಡು ಕೊಡ್ತೀನಿ, ಎಲ್ಲಾದರೂ ಸರ್ವೀಸು ಮಾಡಿಸಿಕೋ ಅಂದಿದ್ದಾನೆ. ನೀನು ಕೊಡೋ ದುಡ್ಡಿಗೆ ಯಾವನೂ ತೊಳೆದುಕೊಡಲ್ಲ. ಕೊಡೋದಾದರೆ ಇಷ್ಟು ಕೊಡು, ಇಲ್ಲದಿದ್ದರೆ ಬಕೀಟು ಕೊಡ್ತೀನಿ ಸ್ವಚ್ಛ ಮಾಡಿಟ್ಟು ಹೋಗು, ನೀನು ಯಾರಾದರೆ ನನಗೇನು? ಅಂದನಂತೆ.

ನನ್ ಪಾಡಿಗೆ ಬೈಕು ಹತ್ಕಂಡು ಸದ್ದಿಲ್ಲದೆ ರೂಮು ಸೇರಿಕೊಳ್ತಿದ್ದೆ. ನಿಮ್ಮ ಅಡ್ವೈಸಿಗೆ ಮರ್ಯಾದೆ ಕೊಟ್ಟು ಟ್ಯಾಕ್ಸಿ ಹತ್ತಿದೆ... ಈಗ ನನ್ನ ಪಾಡು ನೋಡಿ... ಅಂದ. ನಿಮ್ಮಿಂದಲೇ ಈ ಸಮಸ್ಯೆ ಬಂದಿದ್ದು, ಬಗೆಹರಿಸಿಕೊಡಿ ಅನ್ನುವಂತಿತ್ತು ಧೋರಣೆ. 'ಒಳ್ಳೆ ಕಥೆ ಕಣಯ್ಯಾ, ಕರುಳು ತುಂಬ ಕುಡಿದು ಸಿಕ್ಕಸಿಕ್ಕಲ್ಲಿ ಕಕ್ಕು ಅಂತ ನಾನು ಹೇಳಿದ್ದೆನಾ? ತಪ್ ಮಾಡಿ ಇನ್ನೊಬ್ಬರ ಮೇಲೆ ಗೂಬೆ ಕೂರಿಸುವುದನ್ನು ಬಿಡು. ಇದು ನಿನ್ನ ತಪ್ಪು ಬೇಜವಾಬ್ದಾರಿಗಳಿಂದಾದ ಸಮಸ್ಯೆ. ನೀನೆ ಮಾತನಾಡಿ ಬಗೆಹರಿಸಿಕೋ' ಅಂತ ಕಳಿಸಿದ್ದಾಯಿತು.

ಕುಡುಕ ಮಹಾಶಯರೊಂದಿಗಿನ ಇಂಥ ಅನುಭವಗಳಿಗೆ ಕೊನೆಯೆಂಬುದಿಲ್ಲ ಬಿಡಿ. ಪ್ರತಿ ತಪಾಸಣೆಗಳೂ ಹೊಸ ಕಥೆ, ಹೊಸ ಪಾತ್ರಗಳೊಂದಿಗೆ ಮತ್ತೆ ಮತ್ತೆ ತೆರೆದುಕೊಳ್ಳುತ್ತಿರುತ್ತವೆ. ಟೀವೀಲಿ ಬರುವ ಧಾರಾವಾಹಿಗಳಂತೆ ಇದು. ನಾಳಿನ ಎಪಿಸೋಡು ಏನಾಗುತ್ತದೋ ಎನ್ನುವ ಕುತೂಹಲ ಅಲ್ಲೂ ಇದೆ, ಇಲ್ಲೂ ಇದೆ. ಟೀವೀಲಿ ಬರೀ ನೋಡುತ್ತೇವೆ. ಇಲ್ಲಿ ಖುದ್ದು ಅನುಭವಿಸಬೇಕು, ಅಷ್ಟೇ ವ್ಯತ್ಯಾಸ!

## ತುರುವೇಕೆರೆ ರವಿಶಂಕರ್

ತಮ್ಮ ಪೊಲೀಸ್ ವೃತ್ತಿಯ ಅನುಭವಗಳ ಹಿನ್ನೆಲೆಯಲ್ಲಿ ಪ್ರಬಂಧಗಳನ್ನು ಬರೆಯುವ ರವಿಶಂಕರ್ ತುಮಕೂರು ಜಿಲ್ಲೆಯ ತುರುವೇಕೆರೆಯವರು. ಕೆಮಿಕಲ್ ಎಂಜಿನಿಯರಿಂಗ್ ಪದವೀಧರರಾಗಿರುವ ಅವರು ಪ್ರಸ್ತುತ ಬೆಂಗಳೂರು ನಗರ ಗುಪ್ತವಾರ್ತೆ ವಿಭಾಗದಲ್ಲಿ ಪೊಲೀಸ್ ಇನ್‌ಸ್ಪೆಕ್ಟರ್ ಆಗಿದ್ದಾರೆ. 'ಮಯೂರ', 'ಪ್ರಜಾವಾಣಿ', 'ಸುಧಾ'ಗಳಲ್ಲಿ ಅವರ ಪ್ರಬಂಧಗಳು ಪ್ರಕಟವಾಗಿವೆ. ಪ್ರಬಂಧ ಕ್ಷೇತ್ರದಲ್ಲಿ ತಮ್ಮದೇ ಛಾಪು ಮೂಡಿಸಿರುವ ಈ ಲೇಖಕ, ಪೊಲೀಸ್ ಅಧಿಕಾರಿಯಾಗಿ ಕಲಬುರ್ಗಿ, ಮಂಗಳೂರುಗಳಲ್ಲಿ ಹಾಗೂ ಎಸ್‌ಟಿಎಫ್‌ನ ವೀರಪ್ಪನ್ ವಿಶೇಷ ಕಾರ್ಯಾಚರಣೆ ಪಡೆಯಲ್ಲಿ (2005) ಕಾರ್ಯನಿರ್ವಹಿಸಿದ್ದಾರೆ.